# ಅರಮನೆ ಬೆಚ್ಚಿಬೀಳಿಸಿದ 'ಮೇಘ' ಗರ್ಜನೆ!

ಬ್ರಿಟನ್ ರಾಜಮನೆತನದ ಸದಸ್ಯೆಯಾದರೂ ಬಿಡದೇ ಕಾಡಿದ ಆತ್ಮಹತ್ಯೆಯ ಮನಃಸ್ಥಿತಿ, ಅರಮನೆ ಪಡಸಾಲೆಯಲ್ಲೇ ಎದುರಾದ ಜನಾಂಗೀಯ ನಿಂದನೆ, ಸಂಪ್ರದಾಯದ ಹೆಸರಿನಲ್ಲಿ ವಿವಾದದ ಸುಳಿಯಲ್ಲಿ ಸಿಕ್ಕ ಉತ್ತರಾಧಿಕಾರದ ಪಟ್ಟ...

ಕಳೆದ ವಾರವಷ್ಟೇ 'ಸಿಬಿಎಸ್' ಟಿವಿಗೆ ಸುದೀರ್ಘ ಸಂದರ್ಶನ ನೀಡಿದ ಬ್ರಿಟನ್ ರಾಜಮನೆತನದ ಪ್ರಿನ್ಸ್ ಹ್ಯಾರಿ ಅವರ ಪತ್ನಿ ಮೇಘನ್ ಮಾರ್ಕೆಲ್ ಬಹಿರಂಗಗೊಳಿಸಿದ ಸ್ಫೋಟಕ ಮಾಹಿತಿಗಳು ಇವು. ಈ ಸಂದರ್ಶನ, ರಾಣಿ ಎರಡನೇ ಎಲಿಜಬೆತ್ ಅವರ ಬಕಿಂಗ್ ಹ್ಯಾಮ್ ಅರಮನೆಯಲ್ಲಿ ಸುಂಟರಗಾಳಿಯನ್ನೇ ಎಬ್ಬಿಸಿದೆ. ಪ್ರಿನ್ಸ್ ಹ್ಯಾರಿ ಅವರ ಅಮ್ಮ ಡಯಾನ ಸಹ ಹೀಗೆಯೇ 1995ರಲ್ಲಿ ರಾಜಮನೆತನದ ಅಂತಃಪುರದ ವಿಚಾರಗಳು ಬಯಲಿಗೆ ಬರಲು ಕಾರಣರಾಗಿದ್ದರು.

ಪ್ರಿನ್ಸ್ ಚಾರ್ಲ್ಸ್–ಡಯಾನಾ ದಂಪತಿಯ ಪುತ್ರ ಪ್ರಿನ್ಸ್ ಹ್ಯಾರಿ, ಅಮೆರಿಕ ಮೂಲದ ನಟಿ ಮೇಘನ್ ಅವರನ್ನು 2018ರಲ್ಲಿ ವರಿಸಿದ್ದರು. ಸೇಂಟ್ ಜೇಮ್ಸ್ ಅರಮನೆಯಲ್ಲಿ ನಡೆದ ಸಮಾರಂಭದಲ್ಲಿ ಮೇಘನ್ ಅವರನ್ನು ಚರ್ಚ್ ಆಫ್ ಇಂಗ್ಲೆಂಡ್‌ಗೆ ಸೇರ್ಪಡೆ ಮಾಡಿಕೊಳ್ಳಲು ಜೋರ್ಡಾನ್ ನದಿಯ ನೀರನ್ನು ಬಳಸಿ, ಕ್ರಿಶ್ಚಿಯನ್ ಧರ್ಮದ ದೀಕ್ಷೆಯನ್ನು ನೀಡಲಾಗಿತ್ತು. ಅವರ ಮದುವೆಯ ಸಮಾರಂಭವನ್ನು ಬಿಬಿಸಿ ನೇರಪ್ರಸಾರ ಮಾಡಿತ್ತು. ಈ ದಂಪತಿಗೆ ಆರ್ಚಿ ಮೌಂಟ್‌ಬೆಟನ್ ವಿಂಡ್ಸರ್ ಎಂಬ ಪುತ್ರನಿದ್ದು, ಮೇಘನ್ ಈಗ ಮತ್ತೆ ಬಸುರಿ. ಅರಮನೆಯ ಹೊಣೆಗಾರಿಕೆಗಳಿಗೆ ಕಳೆದ ವರ್ಷವೇ ಗುಡ್‌ಬೈ ಹೇಳಿದ್ದ ಹ್ಯಾರಿ–ಮೇಘನ್ ಜೋಡಿ ಈಗ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿದೆ.



'ರಾಜಮನೆತನದ ಪ್ರೆಶರ್ ಕುಕ್ಕರ್ ಜೀವನಕ್ಕೆ ನಾನು ಸುತಾರಾಂ ಸಿದ್ಧವಿರಲಿಲ್ಲ. ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ನನಗೆ ಅರಮನೆಯಲ್ಲಿ ಸಹಾಯವನ್ನೂ ನಿರಾಕರಿಸಲಾಯಿತು. ನನಗೆ ಜನಿಸುವ ಮಗುವಿನ ದೇಹದ ಬಣ್ಣದ ಕುರಿತು ಅರಮನೆಯಲ್ಲಿ ಇದ್ದವರೆಲ್ಲ ಆತಂಕ ವ್ಯಕ್ತಪಡಿಸುತ್ತಿದ್ದರು. ಕಪ್ಪುಬಣ್ಣದ ಮಗು ಜನಿಸಲಿದೆ ಎಂಬ ಭೀತಿ ಅವರಲ್ಲಿತ್ತು. ಆ ದಿನಗಳಲ್ಲಿ ನನ್ನಲ್ಲಿ ಬದುಕುವ ಆಸಕ್ತಿಯೇ ಹೊರಟುಹೋಗಿತ್ತು' ಎಂದು ಸಂದರ್ಶನದಲ್ಲಿ ಮೇಘನ್ ಹೇಳಿದ್ದಾರೆ. ಆದರೆ, ಅರಮನೆಯಲ್ಲಿ ಯಾರಿಂದ ತಮಗೆ ಅನ್ಯಾಯವಾಯಿತು ಎಂಬುದನ್ನು ತಿಳಿಸಲು ಅವರು ನಿರಾಕರಿಸಿದ್ದಾರೆ.

ಅರಮನೆಯ ಅಂತಃಪುರದ ವಿಚಾರಗಳನ್ನು ಬಯಲಿಗೆ ತಂದಿದ್ದಕ್ಕೆ ಇಂಗ್ಲೆಂಡ್‌ನ ಹಲವು ಪತ್ರಿಕೆಗಳು ಮೇಘನ್ ಅವರ ಮೇಲೆ ಮುಗಿಬಿದ್ದಿವೆ. 'ಆಕೆಯೊಬ್ಬ ಲೆಕ್ಕಾಚಾರದ ಹೆಣ್ಣುಮಗಳು, ಸ್ವಾರ್ಥಿ' ಎಂದು ಹೀಗಳೆದಿವೆ. ಹ್ಯಾರಿ ಹಾಗೂ ಮೇಘನ್ ಇಬ್ಬರೂ **'Black Lives Matter'** ಚಳವಳಿಯಲ್ಲಿ ತುಂಬಾ ಸಕ್ರಿಯವಾಗಿ ಪಾಲ್ಗೊಂಡವರು. ಟೆನಿಸ್ ತಾರೆ ಸೆರೆನಾ ವಿಲಿಯಮ್ಸ್, ಮಾರ್ಟಿನ್ ಲುಥರ್ ಕಿಂಗ್ ಜ್ಯೂನಿಯರ್ ಅವರ ಪುತ್ರಿ ಬೆರ್ನಿಸ್ ಕಿಂಗ್ ಸೇರಿದಂತೆ ಹಲವು ದಿಗ್ಗಜರು ಮೇಘನ್ ಅವರ ಬೆಂಬಲಕ್ಕೆ ನಿಂತಿದ್ದಾರೆ.

ಸಂದರ್ಶನವು ಬ್ರಿಟನ್‌ನಲ್ಲೂ ಬಿತ್ತರಗೊಂಡ ಬಳಿಕ ಎಚ್ಚೆತ್ತ ರಾಜಮನೆತನ, ರಾಣಿಯ ಪರವಾಗಿ ಹೇಳಿಕೆಯನ್ನು ಬಿಡುಗಡೆ ಮಾಡಿದೆ. 'ಮೊಮ್ಮಗ ಹ್ಯಾರಿ ಮತ್ತು ಆತನ ಪತ್ನಿ ಕಳೆದ ಕೆಲವು ವರ್ಷಗಳಲ್ಲಿ ಎದುರಿಸಿದ ಸವಾಲಿನ ಸಂದರ್ಭಗಳ ಕುರಿತು ತಿಳಿದು ನೋವಾಗಿದೆ' ಎಂದು ರಾಣಿ ಹೇಳಿದ್ದಾರೆ. 'ಸಂದರ್ಶನದಲ್ಲಿ ಪ್ರಸ್ತಾಪವಾದ ಕೆಲವು ವಿಷಯಗಳನ್ನು ರಾಜಮನೆತನ ಗಂಭೀರವಾಗಿ ಪರಿಗಣಿಸಿದ್ದು, ಖಾಸಗಿಯಾಗಿ ಆ ವಿಷಯಗಳನ್ನು ಬಗೆಹರಿಸಿಕೊಳ್ಳಲಿದೆ. ಹ್ಯಾರಿ, ಮೇಘನ್ ಮತ್ತು ಆರ್ಚಿ ನಮ್ಮ ಕುಟುಂಬದ ಪ್ರೀತಿಯ ಸದಸ್ಯರು' ಎಂದೂ ಅವರು ಹೇಳಿದ್ದಾರೆ.

ಮೇಘನ್ ಅವರ ಸ್ಫೋಟಕ ಸಂದರ್ಶನದ ಕುರಿತು ಇಂಗ್ಲೆಂಡ್ ತುಂಬಾ ಜನಾಭಿಪ್ರಾಯ ಸಂಗ್ರಹದ ಸಮೀಕ್ಷೆಗಳು ಸಹ ನಡೆದಿವೆ. ಯುವಪೀಳಿಗೆ ಮೇಘನ್ ಪರವಾಗಿ ನಿಂತರೆ, ಬಹುತೇಕ ಹಿರಿಯರು ರಾಜಮನೆತನದ ಗೌರವವೇ ಮುಖ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೇಘನ್ ಅವರ ತವರು ಕ್ಯಾಲಿಫೋರ್ನಿಯಾ. ಅವರ ತಂದೆ ಯುರೋಪ್ ಮೂಲದ ಅಮೆರಿಕನ್. ತಾಯಿ ಆಫ್ರಿಕನ್. 'ಹೀಗಾಗಿ ನಾನು ಅರ್ಧ ಬಿಳಿಯಳಾದರೆ, ಇನ್ನರ್ಧ ಕರಿಯಳು. ನನ್ನ ಈ ಮೂಲವೇ ಅರಮನೆಯಲ್ಲಿ ಜನಾಂಗೀಯ ನಿಂದನೆಗೆ ಕಾರಣವಾಯಿತು' ಎಂದು ಆಕೆ ಹೇಳಿದ್ದಾರೆ. ಅರಮನೆಯಿಂದ ಹೊರಬಿದ್ದ ಬಳಿಕ ಕೆಲಕಾಲ ಕೆನಡಾದಲ್ಲಿದ್ದ ಹ್ಯಾರಿ–ಮೇಘನ್ ದಂಪತಿ, ನಂತರ ನೆಲೆ ಕಂಡುಕೊಂಡಿದ್ದು ಅಮೆರಿಕದಲ್ಲಿ. ನೆಟ್‌ಫ್ಲಿಕ್ಸ್ ಹಾಗೂ ಸ್ಪೋಟಿಫೈ ಜತೆ ಕಾರ್ಯಕ್ರಮ ನಿರ್ಮಾಣದ ಒಪ್ಪಂದ ಮಾಡಿಕೊಂಡಿರುವ ಈ ದಂಪತಿ, ಈಗ ಒಟಿಟಿ ಕಾರ್ಯಕ್ರಮಗಳನ್ನು ನಿರ್ಮಾಣ ಮಾಡುವುದರಲ್ಲಿ ಬ್ಯುಸಿ.

ಅಂದಹಾಗೆ, ಹ್ಯಾರಿಯವರು ಮೇಘನ್ ಅವರ ಎರಡನೇ ಪತಿ. ಅಮೆರಿಕದ ಸಿನಿಮಾ ನಿರ್ಮಾಪಕ ಟ್ರೇವರ್ ಏಂಜಲ್‌ಮನ್ ಅವರೊಂದಿಗಿನ ವೈವಾಹಿಕ ಸಂಬಂಧಕ್ಕೆ ಗುಡ್‌ಬೈ ಹೇಳಿದ ಬಳಿಕ ಆಕೆ ಹ್ಯಾರಿ ಕೈಹಿಡಿದಿದ್ದರು. ಅನನ್ಯವಾದ ಸಾಮಾಜಿಕ ಕಾಳಜಿಯನ್ನು ಹೊಂದಿರುವ ಮೇಘನ್, ಸಮಾಜಕ್ಕೆ ನೆರವಾಗುವಂತಹ ಹಲವು ಕಾರ್ಯಕ್ರಮಗಳಲ್ಲಿ ಭಾಗಿ ಆಗುತ್ತಾರೆ. ಸ್ವತಃ ಹಲವು ಸಂಘಟನೆಗಳನ್ನೂ ಕಟ್ಟಿದ್ದಾರೆ. ರಾಜಮನೆತನದಿಂದ ಆಗಿರುವ ಅನ್ಯಾಯದ ವಿರುದ್ಧ ಸಿಡಿದೆದ್ದ ಈ ಧೀರೆಗೆ ಒಂದು ಬೆಸ್ಟ್ ಆಫ್ ಲಕ್.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65